**ದಿನಾಂಕ -  06-11-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು - 2 ನೇ ಪ್ರತಿವಾದಿಯರ ಪರ  ಶ್ರೀ  ವಿ.ವಿ.ಪಿ., ವಕೀಲರಿಂದಃ**

ದಿನಾಂಕ 02-12-2015 ರಂದು ಮೊಕ್ತ್ಯಾರುನಾಮೆ  ತಯಾರಿಸುವ ಸಮಯ ನಾನು ಹಾಜರು ಇರಲಿಲ್ಲ. ಸದರಿ ದಾಖಲಾತಿಗೆ 2 ನೇ ಪ್ರತಿವಾದಿ ಸಹಿ ಮಾಡಿರುವುದನ್ನು ನಾನು ಖುದ್ದಾಗಿ ನೋಡಿರುವುದಿಲ್ಲ. ನಾನು ಸದರಿ ದಾಖಾಲಾತಿಯನ್ನು ನೋಟರಿ ಮಾಡಿದ ವಕೀಲರನ್ನು ವಿಚಾರಿಸಿರುವುದಿಲ್ಲ. ಸದರಿ ಮೊಕ್ತ್ಯಾರುನಾಮೆಗೆ ಹಾಗೂ 2 ನೇ ಪ್ರತಿವಾದಿಗೆ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಸದರಿ ದಾಖಲಾತಿಗೆ ಸಂಬಂದಿಸಿದಂತೆ 2 ನೇ ಪ್ರತಿವಾದಿಯು ಉಡುಪಿ ನಗರ ಠಾಣೆಗೆ 3 ನೇ ಪ್ರತಿವಾದಿ ವಿರುದ್ದ ದೂರು ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಯ ವೃದ್ಧಾಪ್ಯತನ ಹಾಗೂ ಒಳ್ಳೆಯತನವನ್ನು ದುರುಪಯೋಗಪಡಿಸಿಕೊಂಡು 3 ನೇ ಪ್ರತಿವಾದಿ ಸದರಿ ಮೊಕ್ತ್ಯಾರುನಾಮೆಯನ್ನು ಸೃಷ್ಟಿಸಿರುತ್ತಾನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಲಪಟಾಯಿಸಲು 3 ನೇ ಪ್ರತಿವಾದಿ ಸದರಿ ದಾಖಲಾತಿಯನ್ನು ಸೃಷ್ಟಿಸಿರುತ್ತಾನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ. ಉಡುಪಿ.